ಹೃದಯಿಯಾದ ಒಬ್ಬ ತರುಣಿ ಎಂದು ಮತ್ತೆ ಕೆಲವರು ಹಟ ಹಿಡಿದರು. ಕೊನೆಗೆ ಎಲ್ಲರಿಗೂ ಗೊತ್ತಾದ ವಿಚಾರವೆಂದರೆ ಮುಳುಗಿದ್ದು ಒಂದು ಪಿಯಾನೊ ಅಂತ.

ಜನರೆಲ್ಲ ಕಿಟಿಕಿಯ ಬಳಿ ನಿಂತು ಯಾವ್ಹೊ ದೆ ಒಲಿವೈರಾ ಹಿಂತಿರುಗಿ ಹೋದುದನ್ನು ನೋಡಿದರು.

'ಅದೇ ವ್ಯಕ್ತಿ.' ಯಾರೋ ಹೇಳಿದರು. ಒಲಿವೈರಾ ನಿಧಾನವಾಗಿ ನೆಲ ನೋಡುತ್ತಾ ಹೆಜ್ಜೆ ಹಾಕಿದ. ಪ್ರತಿಯೊಬ್ಬರಿಗೂ ಅವನ ಮೇಲೆ ಗೌರವ ಭಾವ ಹುಟ್ಟಿತು.

ಮನೆಗೆ ಬಂದವನೇ ಅವನು 'ಅದು ಹೋಯಿತು, ರೊಸಾಲಿಯ. ಹಿಂದಿರುಗಿ ಬರಲಾಗದಷ್ಟು ದೂರವನ್ನು ಅದು ದಾಟಿತು' ಎಂದ.

'ಆ ಬಗ್ಗೆ ಮಾತನಾಡುವ. ಮೊದಲು ಉಡುಪು ಬದಲಾಯಿಸಿ ಬಾ, ಯಾವ್ಹೊ.'

'ರೊಸಾಲಿಯ, ನಮ್ಮ ಪಿಯಾನೊ ಮರಳಿ ಬರುವುದಿಲ್ಲ.'

'ಖಂಡಿತ ಮರಳಿ ಬರುವುದಿಲ್ಲ. ಅದಕ್ಕಾಗೇ ನೀನು ಅದನ್ನು ಸಮುದ್ರಕ್ಕೆ ಎಸೆದಿದ್ದಿ.'

ಸಾರಾ, 'ಯಾರಿಗೆ ಗೊತ್ತು, ಅದು ಯಾವುದೋ ದಡಕ್ಕೆ ಮುಟ್ಟಲೂ ಬಹುದು' ಎಂದಳು.

'ಇನ್ನು ಮುಂದೆ ಅದರ ಬಗ್ಗೆ ನಾವು ಮಾತನಾಡುವುದು ಬೇಡ. ಮುಗಿಯಿತು ಅದರ ಕಥೆ. ಅದರ ಅಂತ್ಯವಾಯಿತು. ಸಾರಾ, ಇನ್ನು ನೀನು ಆ ಕೋಣೆಯನ್ನು ಬಳಸಬಹುದು.'

ಒಂದು ಕ್ಷಣ ತಡೆದು ಯಾವ್ಹೊ ಮತ್ತೆ ತನ್ನ ಪ್ರಲಾಪ ಆರಂಭಿಸಿದ, 'ಅಲೆಗಳು ಅದನ್ನು ಒಳಗೆ ಸೆಳೆದದ್ದನ್ನು ನಾನು ನೋಡಿದೆ.'

'ಸಾಕು ನಿಲ್ಲಿಸು.'

'ಎರಡು ಬಾರಿ ಅದು ದಡಕ್ಕೆ ಮರಳಿತ್ತು.'

'ಅದರ ಕಥೆ ಮುಗಿಯಿತಲ್ಲ? ಇನ್ನು ಅದರ ಬಗ್ಗೆ ಯೋಚಿಸುವುದು ಬೇಡ.'

'ನನ್ನನ್ನು ಹುಚ್ಚ ಅಂತ ತಿಳಿದುಕೊಂಡಾರು ಅಂತ ನಾನು ಯಾರಿಗೂ ಹೇಳಲಿಲ್ಲ... ಆದರೂ ಅವರು ನಾನು ಹುಚ್ಚನಿರಬಹುದೆಂದು ಊಹಿಸಿದರು. ನಿಜ ಹೇಳುವುದಾದರೆ ಈ ಸುತ್ತುಮುತ್ತಿನಲ್ಲಿ ವಿವೇಚನೆಯುಳ್ಳ ವ್ಯಕ್ತಿ ಇದ್ದರೆ ಅದು ನಾನೊಬ್ಬನೇ. ಆದರೆ, ತುಸು ಸಮಯದ ಹಿಂದೆ ಆ ಪಿಯಾನೊದ ಶವಯಾತ್ರೆಯ ಸಂಗೀತವನ್ನು ನಾನು ಸ್ಪಷ್ಟವಾಗಿ ಕೇಳಿದೆ.'

'ಅದು ನಿನ್ನೆ ರಾತ್ರಿ, ಯಾವ್ಹೊ.' ರೊಸಾಲಿಯ ನೆನಪು ಮಾಡಿಕೊಟ್ಟಳು.

'ಇಲ್ಲ, ಅದು ಸಮುದ್ರದ ಬಳಿ. ಸ್ವಚ್ಛ ಹಗಲಿನಲ್ಲಿ. ನೀನು ಕೇಳಿಲ್ಲವೇ ಸಾರಾ? ಅಲೆಗಳ ನೊರೆಗಳಲ್ಲಿ ಅದು ಕೊಚ್ಚಿ ಹೋದಾಗ ಆ ಸಂಗೀತ ನಿಂತುಹೋಯಿತು.'

ಅವನು ಅನಿವಾರ್ಯ ನಿರಾಸೆಯಿಂದ ತಲೆಯಲ್ಲಾಡಿಸಿ ತನ್ನಷ್ಟಕ್ಕೆ ತಾನೆ ಮಾತನಾಡತೊಡಗಿದ– 'ಈಗ ಅದು ಬಹಳ ದೂರ ಮುಟ್ಟಿರಬೇಕು. ನೀರಿನೊಳಗೆ. ಎಲ್ಲ ವಿಚಿತ್ರಗಳನ್ನೂ ಹಿಂದೆ ಹಾಕಿ. ನೌಕೆಗಳ ಭಗ್ನಾವಶೇಷಗಳು, ಜಲಾಂತರ್ಗಾಮಿಗಳು, ಮೀನುಗಳು. ನಿನ್ನೆಯ ತನಕ ಅದು ಈ ಕೋಣೆಯಿಂದ ಹೊರ ಹೋಗಿರಲಿಲ್ಲ... ಇಂದಿನಿಂದ ವರುಷಗಳ ಬಳಿಕ ಸಮುದ್ರದಾಚೆಯ ಯಾವುದೋ ದಡದಲ್ಲಿ ಅದು ಮೇಲಕ್ಕೆ ಬರಬಹುದು. ಆಗ, ನಾನು, ಸಾರಾ ಮತ್ತು ರೊಸಾಲಿಯ ಸತ್ತರೂ ಅದು ಈ ಮನೆಯಲ್ಲಿ ನುಡಿಸಿದ ಸಂಗೀತವನ್ನು ನೆನಪಿಸಿಕೊಳ್ಳುತ್ತದೆ.'

ಅವನು ಕೋಣೆಯಿಂದ ಹೊರಹೋದ. ಒಬ್ಬಳೇ ಆದ ಸಾರಾ ಪಿಯಾನೊ ಇದ್ದ ಸ್ಥಳವನ್ನು ನಿರುಕಿಸಿದಳು. ತಮ್ಮ ಮೊದಲ ರಾತ್ರಿಯ ಹಾಸಿಗೆಯನ್ನು ಅಲ್ಲಿ ಧೇನಿಸಿದಳು. ಆದರೆ, ಈ ಬಾರಿ ಅವಳಲ್ಲಿ ಒಂದು ತಪ್ಪು ಭಾವನೆ ಕಾಡಿತು. ಬಾಗಿಲು ಬಡಿದ ಶಬ್ದದಿಂದ ಅವಳ ಯೋಚನೆಗೆ ಭಂಗ ಉಂಟಾಯಿತು. ಕೆಲವು ಅಧಿಕೃತ ಕಾಗದಪತ್ರಗಳನ್ನು ಹಿಡಿದುಕೊಂಡು ವ್ಯಕ್ತಿಯೊಬ್ಬ ಒಳಗೆ ಕಾಲಿಟ್ಟ. ಅವಳ ಅಪ್ಪ ತ್ಯಜಿಸಿದ ಪಿಯಾನೊದ ಒಳಗೆ ಗುಟ್ಟಾಗಿ ಒಂದು ರೇಡಿಯೋ ಇದೆ ಎಂಬುದಾಗಿ ಪೋಲಿಸರಿಗೆ ಒಂದು ಮೂಗರ್ಜಿ ಮುಟ್ಟಿತ್ತು. ಜಿಲ್ಲಾ ಪೋಲಿಸ್ ಠಾಣೆಗೆ ಹಾಜರಾಗಿ ಅಪ್ಪ ಅವರ ಪ್ರಶ್ನೆಗಳಿಗೆ ಉತ್ತರಿಸಬೇಕಿತ್ತು. 'ನಿಜ, ಯುದ್ಧದ ಸಮಯದಲ್ಲಿ ಇಂಥ ಒಂದು ಪರಿಸ್ಥಿತಿಯನ್ನು ನೀವು ಊಹಿಸಬಲ್ಲಿರಿ. ಯಾರೂ ಏನೂ ಮಾಡಲಾಗುವುದಿಲ್ಲ.'

ಒಲಿವೈರಾ ದಿನದ ಉಳಿದ ಭಾಗವನ್ನೆಲ್ಲ ಪೋಲಿಸು ಠಾಣೆಯಲ್ಲಿಯೇ ಕಳೆದ. ಅವನು ಮನೆಗೆ ಮರಳುವಾಗ ರಾತ್ರಿ ತುಂಬ ತಡವಾಗಿತ್ತು.